ಕಟ್ಟಬೇಕಾಗುತ್ತದೆ. 15 ರೂಪಾಯಿ ಕೇಂದ್ರ ಸರ್ಕಾರ, 15 ರೂಪಾಯಿ ರಾಜ್ಯ ಸರ್ಕಾರ ಕಟ್ಟುತ್ತದೆ. ಕಳೆದ ವರ್ಷ ಒಂದು ಕೋಟಿ ರೂಪಾಯಿಗಳನ್ನು ಈ ವಿಚಾರದಲ್ಲಿ ಖರ್ಚುಮಾಡಿದ್ದೇವೆ. ಈಗಾಗಲೇ 3100 ಜನ ಜೀವವಿಮೆ ಮಾಡಿಸಿದ್ದಾರೆ. ಈ ವರ್ಷ 6,015 ಜನರನ್ನು ನಾವು ಗುರಿ ಇಟ್ಟುಕೊಂಡಿದ್ದೇವೆ. ಅದಕ್ಕಾಗಿ ಸುಮಾರು ಎರಡು ಕೋಟಿ ರೂಪಾಯಿಗಳನ್ನು ನಾವು ಬಿಡುಗಡೆ ಮಾಡಿದ್ದೇವೆ. ತಾವು ಹೇಳಿದಂತೆ ಹೆಚ್ಚು ವ್ಯಾಪಕವಾದಂತಹ ಪ್ರಚಾರವನ್ನು ಮಾಡಬೇಕಾಗಿದೆ. ಆದುದರಿಂದ ಇದನ್ನು ಖಂಡಿತವಾಗಿ ಗಮನದಲ್ಲಿಟ್ಟುಕೊಂಡು ಪ್ರಚಾರ ಮಾಡುತ್ತೇವೆ.

ವಿಷಯ:- ಕಾರವಾರ ಸಿವಿಲ್ ಆಸ್ಪತ್ರೆಗೆ ಔಷಧಿ ಸರಬರಾಜು.

338(2329) **ಶ್ರೀ ವಸಂತ ಆಸ್ನೋಟಿಕರ್ (ಕಾರವಾರ):-** ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಾರವಾರ ಸಿವಿಲ್ ಆಸ್ಪತ್ರೆಗೆ 1996–97ರ ಸಾಲಿನಲ್ಲಿ ಔಷಧಿಗಾಗಿ ನೀಡಿದ ಹಣವೆಷ್ಟು?

ಆ) ಆಸ್ಪತ್ರೆಯಲ್ಲಿ ಈಗ ಸಾಕಷ್ಟು ಔಷಧಿಗಳಿವೆಯೇ?

ಇ) ಹುಚ್ಚುನಾಯಿ ಕಡಿತ ಹಾಗೂ ಹಾವು ಕಡಿತದ ಔಷಧಿಗಳು ಈ ಆಸ್ಪತ್ರೆಯಲ್ಲಿ ದೊರೆಯುವುದೇ?

ಡಾ।। ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಅ) 1996–97ನೇ ಸಾಲಿನ ಆಯವ್ಯಯದಲ್ಲಿ (ದಿನಾಂಕ: 1–4–1996 ರಿಂದ 30–9–1996ರ ಅವಧಿಗೆ) ಶೇಕಡ 40ರ ಅಂದಾಜಿನಲ್ಲಿ ರೂ. 3 ಲಕ್ಷಗಳನ್ನು ನೇರ ಖರೀದಿಗಾಗಿ ಮತ್ತು ಸರ್ಕಾರಿ ಔಷಧಿ ಮಳಿಗೆ, ಬೆಂಗಳೂರಿನಿಂದ ಸರಬರಾಜು ಆಗುವ ಔಷಧ ಮತ್ತು ರಾಸಾಯನಿಕಗಳಿಗೆ ರೂ. 1.00 ಲಕ್ಷಗಳನ್ನು (ಒಟ್ಟು 4 ಲಕ್ಷ ರೂಗಳು) ಈಗಾಗಲೇ ಬಿಡುಗಡೆ ಮಾಡಲಾಗಿದೆ.

ಆ) ಸಾಕಷ್ಟು ಔಷಧಿಗಳಿರುತ್ತವೆ.

ಇ) ದೊರೆಯುತ್ತದೆ, ಹುಚ್ಚುನಾಯಿ ಕಡಿತಕ್ಕೆ 1996–97ನೇ ಸಾಲಿನಲ್ಲಿ 168 ವಯಲ್‌ಗಳ ಔಷಧಿ ಸರಬರಾಜಾಗಿತ್ತು. ಈಗ 9 ವಯಲ್‌ಗಳು ಇವೆ. (1 ವಯಲ್‌ನ ಪರಿಮಾಣ 30 ಎಂಎಲ್ ಇರುತ್ತದೆ) ಹಾವು ಕಡಿತಕ್ಕೆ 1996–97ನೇ ಸಾಲಿನಲ್ಲಿ 100 ವಯಲ್‌ಗಳ ಔಷಧಿ ಸರಬರಾಜಾಗಿತ್ತು. ಈಗ 40 ವಯಲ್‌ಗಳು ಇರುತ್ತವೆ.

ಶ್ರೀ ವಸಂತ ಆಸ್ನೋಟಿಕರ್ ಕಮಲಾಕರ:- ಮಾನ್ಯ ಅಧ್ಯಕ್ಷರೇ, ಕಾರವಾರ ಜಿಲ್ಲೆ ಆಸ್ಪತ್ರೆಗೆ 1996ನೇ ಸಾಲಿನಲ್ಲಿ ದಿನಾಂಕ 1.4.96 ಹಾಗೂ 30.9.96ರಲ್ಲಿ ನಾಲ್ಕು ಲಕ್ಷ ರೂಪಾಯಿಗಳ ಔಷಧವನ್ನು ಬಿಡುಗಡೆ ಮಾಡಲಾಗಿದೆ ಎಂದು ಹೇಳಿದ್ದಾರೆ. ಆದರೆ ಅಲ್ಲಿ ನಮಗೆ ಬೇಕಾದಂತಹ ಯಾವುದೇ ಔಷಧಿ ಸಿಗುತ್ತಿಲ್ಲ. ಆದ್ದರಿಂದ ಸಚಿವರು ಯೋಗ್ಯ ರೀತಿಯಲ್ಲಿ ಔಷಧವನ್ನು ಬಿಡುಗಡೆ ಮಾಡುವಂತಹ ವ್ಯವಸ್ಥೆ ಮಾಡಬೇಕು.

ಡಾ।। ಹೆಚ್.ಸಿ. ಮಹದೇವಪ್ಪ:- ಮಾನ್ಯ ಅಧ್ಯಕ್ಷರೇ, ಕಾರವಾರ ಜಿಲ್ಲೆಯ ಆಸ್ಪತ್ರೆಗೆ ವಾರ್ಷಿಕ 18 ಲಕ್ಷ ರೂಪಾಯಿಗಳನ್ನು ಔಷಧ ಖರೀದಿಗಾಗಿ ಕೊಡುತ್ತೇವೆ. ಇದರಲ್ಲಿ 40 ಪರ್ಸೆಂಟ್ ಜಿ.ಎಂ.ಎಸ್.ನಿಂದ ಮತ್ತು 60 ಪರ್ಸೆಂಟ್ ಹಣದಲ್ಲಿ ಅವರು ಲೋಕಲ್ಲಾಗಿ ಪರ್ಚೇಸ್ ಜಿಲ್ಲಾ ಆಸ್ಪತ್ರೆಗೆ ಸರ್ಜನ್ ಮುಖಾಂತರ ಮಾಡುತ್ತಾರೆ ಮತ್ತು ಉಳಿದ ಹಣವನ್ನು ಅಂದರೆ ಈಗಾಗಲೇ ನಾಲ್ಕು ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ.

ಅಧ್ಯಕ್ಷರು:- ತಾವು ಸದಸ್ಯರ ಹತ್ತಿರ ಡೀಟೈಲ್ಸ್ ತೆಗೆದುಕೊಂಡು ಯಾವ ಔಷಧ ಇಲ್ಲ ಎಂಬುದನ್ನು ತಿಳಿದುಕೊಂಡು kindly make arrangement for supply of Drugs. ಯಾವ ಔಷಧಿಯೂ ಸಿಗುತ್ತಾ ಇಲ್ಲ ಎನ್ನುವ ದೂರು ಬಂದಿದೆ ಅದನ್ನು ದಯಮಾಡಿ ಕಳುಹಿಸಿಕೊಡಿ.

ಶ್ರೀ ವಸಂತ್ ಆಸ್ನೋಟಿಕರ್ ಕಮಲಾಕರ:- ಯಾವುದೇ ಔಷಧಿ ಸಹ ಸಿಗುತ್ತಾ ಇಲ್ಲ.

ಅಧ್ಯಕ್ಷರು:- ನೀವು ನಿಮ್ಮ ವೈದ್ಯಾಧಿಕಾರಿಗಳನ್ನು ಯಾವ ಔಷಧಿಯ ಕೊರತೆ ಇದೆ ಎಂದು ಕೇಳಿ ಅದನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತಂದರೆ ಅವರು ಸಪ್ಲೈ ಮಾಡುವಂತಹ ವ್ಯವಸ್ಥೆ ಮಾಡುತ್ತಾರೆ.

ಶ್ರೀ ವಸಂತ್ ಆಸ್ನೋಟಿಕರ್ ಕಮಲಾಕರ:- ಮಾನ್ಯ ಅಧ್ಯಕ್ಷರೇ, ಅಲ್ಲಿ ಹುಚ್ಚು ನಾಯಿ ಕಡಿದರೂ ಅದಕ್ಕೆ ಔಷಧಿ ಇಲ್ಲ. ಎರಡು ತಿಂಗಳ ಹಿಂದೆ ನಾಲ್ಕು ಜನರಿಗೆ ಹುಚ್ಚುನಾಯಿ ಕಡಿಯಿತು ಆದರೆ ಆಗ ಔಷಧ ಇಲ್ಲದೆ ನಾನು ಒಂಭತ್ತು ಸಾವಿರ ರೂಪಾಯಿ ಕೊಟ್ಟು ಔಷಧವನ್ನು ಹೊರಗಡೆಯಿಂದ ತಂದುಕೊಟ್ಟಿದ್ದೇನೆ. ಅದನ್ನು ವಿಚಾರ ಮಾಡಬೇಕು. ನಾನು 2-3 ಸಲ ಭೇಟಿ ಮಾಡಿ ಮಾತನಾಡಿದ್ದೇನೆ.

ಡಾ।। ಹೆಚ್.ಸಿ. ಮಹದೇವಪ್ಪ:- ಮಾನ್ಯ ಅಧ್ಯಕ್ಷರೇ, ಹುಚ್ಚು ನಾಯಿ ಕಡಿತಕ್ಕೆ 168 ವಾಯಲ್ಸ್ ಕೊಟ್ಟಿದ್ದೇವೆ. ಒಂದು ವಾಯಲ್‌ನಲ್ಲಿ 30 ಎಂಎಲ್ ಇರುತ್ತದೆ. ಅದರ ಅವಧಿ ಆರು ತಿಂಗಳು ಇದೆ. ಆರು ತಿಂಗಳು ಆದ ಮೇಲೆ ಅದನ್ನು ಉಪಯೋಗಿಸುವುದಕ್ಕೆ ಬರುವುದಿಲ್ಲ. ಜೊತೆಗೆ ಹಾವಿನ ಕಡಿತಕ್ಕೂ ಕೂಡ ನೂರು ವಾಯಲ್ ಕೊಟ್ಟಿದ್ದೇವೆ. ಈಗ 60 ಖರ್ಚು ಮಾಡಿ 40 ವಾಯಲ್ ಅಲ್ಲಿ ಉಳಿದಿದೆ. ಹೆಚ್ಚಿಚ್ಚು ಸಂಗ್ರಹಣೆ ಮಾಡಿ ಅಲ್ಲಿ ಕ್ರೋಢೀಕರಿಸುವುದಕ್ಕೆ ಆಗುವುದಿಲ್ಲ. ಆ ಔಷಧಗಳ ಲೈಫ್ ಟೈಂ ತುಂಬಾ ಕಡಿಮೆ ಇರುತ್ತದೆ. ಅಲ್ಲಿ ನಾಲ್ಕು ಲಕ್ಷ ರೂಪಾಯಿ ಬಿಡುಗಡೆ ಮಾಡಿದ್ದೇವೆ. ಅಗತ್ಯ ಬಿದ್ದರೆ ನಿಯಾಮಾನುಸಾರ ಕ್ರಮ ಕೈಗೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು:- ಹುಚ್ಚುನಾಯಿ ಕಡಿತಕ್ಕೆ ಔಷಧವನ್ನು ತರಿಸಿ ಕೊಡುತ್ತಾರೆ.

ಶ್ರೀ ಅರಗ ಜ್ಞಾನೇಂದ್ರ:- ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದಲ್ಲೂ ಆಷ್ಟೇ, ಬೆಳಗಾಂನಿಂದ ಪೂರೈಕೆಯಾಗತಕ್ಕಂಥ ಆಂಟಿ ರೇಬೀಸ್ ಇಂಜಕ್ಷನ್‌ನ್ನು ಏನಿದೆ ಅದು ಸರಿಯಾದ ರೀತಿಯಲ್ಲಿ

ಸರಬರಾಜು ಆಗುತ್ತಿಲ್ಲ. ಏಕೆಂದರೆ ಆ ಇಂಜಕ್ಷನ್‌ನ್ನು ನಿರಂತರವಾಗಿ ಏಳು ತೆಗೆದುಕೊಳ್ಳಬೇಕು. ಒಂದು ದಿನ ಇಂಜಕ್ಷನ್ ಕೊಡುವುದು ತಪ್ಪಿದರೆ ಮತ್ತೆ ನಿರಂತರವಾಗಿ ಒಂದರಿಂದ ಏಳರವರೆಗೆ ತೆಗೆದುಕೊಳ್ಳಬೇಕಾಗುತ್ತದೆ.

ಅಧ್ಯಕ್ಷರು:- ನಾವು ನೀವು ಪ್ರಜ್ಞಾವಂತರು, ಎಲ್ಲಾ ಸೇರಿ ಹುಚ್ಚುನಾಯಿಗಳನ್ನು ಇಲ್ಲದಂತೆ ಮಾಡಬೇಕು.

ಶ್ರೀ ಆರಗ ಜ್ಞಾನೇಂದ್ರ:- ಮಾನ್ಯ ಅಧ್ಯಕ್ಷರೇ, ಅಕಸ್ಮಾತ್ತಾಗಿ ಗ್ರಾಮಾಂತರ ಪ್ರದೇಶದಲ್ಲಿ ನಾಯಿ ಕಡಿದಂತಹ ಸಂದರ್ಭದಲ್ಲಿ ಔಷಧ ಕೊಡುವುದಕ್ಕೆ ವ್ಯವಸ್ಥಿತವಾಗಿ ಔಷಧ ಸರಬರಾಜು ಆಗಬೇಕು.

ಅಧ್ಯಕ್ಷರು:- ನಾವು ಹುಚ್ಚುನಾಯಿಗಳ ಕಾಟವನ್ನು ಆದಷ್ಟು ಕಡಿಮೆ ಮಾಡಿಕೊಳ್ಳಬೇಕು.

ಶ್ರೀ ಆರಗ ಜ್ಞಾನೇಂದ್ರ:- ಆದು ನಾಲ್ಕು ಕಾಲಿನದು, ಅವರು ಕೋಟಾ ಫಿಕ್ಸ್ ಮಾಡಿದ್ದಾರೆ. ಈಗ ಹುಚ್ಚುನಾಯಿಗೆ ಅವರು ಹೇಳಬೇಕು ಇಷ್ಟೇ ಕಚ್ಚಬೇಕು ಎಂದು. ಇಲ್ಲದೇ ಇದ್ದರೆ ಜಾಸ್ತಿ ಔಷಧ ಕಳುಹಿಸಬೇಕು. ಎರಡರಲ್ಲಿ ಒಂದು ಆಗಬೇಕು.

ಡಾ॥ ಹೆಚ್.ಸಿ. ಮಹದೇವಪ್ಪ:- ಅಧ್ಯಕ್ಷರೇ, ಬೆಳಗಾಂನಿಂದ ವ್ಯಾಕ್ಸೀನ್ ತರಿಸಿಕೊಡಲಿಕ್ಕೆ ಏನೂ ತೊಂದರೆ ಇಲ್ಲ, ಆದರೆ ಆದರ ಲೈಫ್ ಸ್ಪ್ಯಾನ್ ಕಡಿಮೆ ಇದೆ, ಯಾವಾಗ ಕಡಿಯುತ್ತದೆ ಏನು ಎಂದು ಗೊತ್ತಾಗುವುದಿಲ್ಲ. ಕಡಿಮೆ ಪ್ರಮಾಣದಲ್ಲಿ ಇದನ್ನು ಇಟ್ಟುಕೊಳ್ಳಬೇಕಾಗುತ್ತದೆ. ಆರು ತಿಂಗಳು ಅವಧಿ ಇರುವುದರಿಂದ ಅದನ್ನು ತಂದು ಇಟ್ಟುಕೊಂಡು ಮತ್ತೆ ಅದನ್ನು ಹಾಳು ಮಾಡುವುದಕ್ಕೆ ಆಗುವುದಿಲ್ಲ. ಅದರ ಅಗತ್ಯ ಎಲ್ಲಿ ಇದೆ ಅಲ್ಲಿಗೆ ತರಿಸಿಕೊಡುತ್ತೇನೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಹುಚ್ಚುನಾಯಿ ಕಡಿದವರಿಗೆ ಔಷಧಿಯನ್ನು ಕೊಡುವುದಕ್ಕಿಂತಲೂ ಹಿಂದೆ ಒಂದು ಪದ್ಧತಿ ಇತ್ತು. ಎಲ್ಲಾ ಹಳ್ಳಿಗಳಲ್ಲಿ ನಾಯಿಗಳ ಸಂಖ್ಯೆ ಜಾಸ್ತಿ ಯಾದಾಗ ಅವಕ್ಕೆ ವಿಷ ಕೊಟ್ಟು ಸಾಯಿಸತಕ್ಕಂಥ ಪದ್ಧತಿ ಇತ್ತು. ಏಕೆಂದರೆ ನಾಯಿಗಳಿಗೆ ಫ್ಯಾಮಿಲಿ ಪ್ಲಾನಿಂಗ್ ಇರಲಿಲ್ಲ ಯದ್ವಾತದ್ವಾ ಜಾಸ್ತಿಯಾಗಿಬಿಟ್ಟಿದೆ. ಆದ್ದರಿಂದ ನಾಯಿಗಳ ಸಂಖ್ಯೆ ಕಡಿಮೆ ಮಾಡಿದರೆ ಅಲ್ಪ ಸ್ವಲ್ಪ ಸುಧಾರಣೆಯಾಗುತ್ತದೆ.

ಶ್ರೀ ಬಿ.ಎನ್. ಬಚ್ಚೇಗೌಡ:- ಮಾನ್ಯ ಅಧ್ಯಕ್ಷರೇ, ಅನಿಮಲ್ ಬರ್ತ್ ಕಂಟ್ರೋಲ್ ಎಂದು ಹೇಳಿ ನಾಯಿಗಳಿಗೆ ವಿಷ ಹಾಕಿ ಆಗಲೀ ಅಥವಾ ಬೇರೆ ರೀತಿ ಆದನ್ನು ಮುಗಿಸುವಂಥ ಕಾರ್ಯ ಮಾಡಬಾರದು ಎಂದು ಹೇಳಿ ಈಗ ಎ.ಬಿ.ಸಿ. ಮಾಡಿರುವ ತೀರ್ಮಾನದ ಮೇಲೆ PUFAM ಎಂಬ ಒಂದು ಆರ್ಗನೈಜೇಷನ್ ಈಗ ಮಾಡುತ್ತಿದ್ದಾರೆ. ಬೆಂಗಳೂರಿನಲ್ಲೂ ಕೂಡ ಕಾರ್ಪೊರೇಷನ್‌ನವರು ನಾಯಿಗಳನ್ನು ಹಿಡಿದು ಮಾಡುತ್ತಿದ್ದರು. ಆದೇ ರೀತಿ ರಾಜ್ಯದಲ್ಲೂ ಮಾಡುತ್ತಿದ್ದರು. ಮಾನ್ಯ ಪುಟ್ಟಣ್ಣಯ್ಯನವರು ಹೇಳಿದಂತೆ ಆದಕ್ಕೆ ವಿಷ ಹಾಕಿ ಆಗಲೀ, ಅಥವಾ ಬೇರೆ ರೀತಿಯಲ್ಲಿ ನಮ್ಮ

ಬೆಂಗಳೂರು ಮಹಾನಗರಪಾಲಿಕೆಯವರು ಎಲೆಕ್ಟ್ರಿಕ್ಯೂಟ್ ಮಾಡುತ್ತಿದ್ದರು. ಈಗ ಎರಡೂ ಮಾಡದೆ ಅದಕ್ಕೆ ಹೆಬ್ಬಾಳದಲ್ಲಿ ಬೇರೆ ಬೇರೆ ಜಾಗಗಳಲ್ಲಿ ಎ.ಬಿ.ಸಿ. ಮಾಡಿ ಕ್ರೂರತನವನ್ನು ತಪ್ಪಿಸಬೇಕು ಎಂಬ ದೃಷ್ಟಿಯಿಂದ ಮತ್ತೆ ಬಿಡುವಂತದ್ದು ನಡೆಯುತ್ತಿದೆ. ಆದ್ದರಿಂದ ರಾಜ್ಯದ ಯಾವುದೇ ಮುನಿಸಿಪಾಲಿಟಿ–ಗಳಲ್ಲೂ ಕೂಡ ನಾವು ವಿಷವನ್ನು ಹಾಕಿ ಆ ಕಾನೂನಿನನ್ವಯ ಸಾಯಿಸುವಂತಿಲ್ಲ. ಶ್ರೀಮತಿ ಮೇನಕಾಗಾಂಧಿಯವರು ಮಂತ್ರಿಗಳಾಗಿದ್ದಾಗ ಅದನ್ನು ಮಾಡಿದ್ದಾರೆ. that law prevails now. ಆದ್ದರಿಂದ ಅದು ಸಾಧ್ಯವಾಗುವುದಿಲ್ಲ. ಈ ಎ.ಬಿ.ಸಿ. ಅಂದರೆ ಅನಿಮಲ್ ಬರ್ತ್ ಕಂಟ್ರೋಲ್, 10–20 ಭಾಗ ರಾಜ್ಯದಲ್ಲಿ ಆಗಿದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಮಾನ್ಯ ಅಧ್ಯಕ್ಷರೇ, ಪ್ರಾಣಿ ವರ್ಗದಲ್ಲಿ ನಂಬಿಕೆ ಇರತಕ್ಕಂಥ ಪ್ರಾಣಿ ನಾಯಿ. ಅದನ್ನು ಹಿಡಿದು ವಿಷಕೊಡುವುದಕ್ಕಿಂತ ಕಾನೂನಿನ ವ್ಯಾಪ್ತಿಯಲ್ಲಿ ಅದು ಸೇರ–ತಕ್ಕಂಥದ್ದು ಒಂದು. ನಾನು ಸನ್ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರಲ್ಲಿ ಮತ್ತು ನಗರಾಭಿವೃದ್ಧಿ ಸಚಿವರಲ್ಲಿ ವಿನಂತಿ ಮಾಡುತ್ತೇನೆ, ಅವರು ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ಮಟ್ಟದಲ್ಲಿ ಅದಕ್ಕೆ ಟ್ರೀಟ್‌ಮೆಂಟ್ ಮಾಡಿ ಅದಕ್ಕೆ ಬೆಲ್ಟ್ ಹಾಕಿ ಅವುಗಳನ್ನು ಆರೋಗ್ಯ–ವಂತವನ್ನಾಗಿ ಇಡಲಿಕ್ಕೆ ಕ್ರಮವನ್ನು ಕೈಗೊಳ್ಳಬೇಕೆಂದು ತಮ್ಮ ಮೂಲಕ ನಾನು ಪ್ರಾರ್ಥನೆ ಮಾಡು–ತ್ತೇನೆ.

MR. SPEAKER:- The normal dog is a rational being. ಹುಚ್ಚುನಾಯಿ ಅಂದರೆ ಅದು ಇರ್ಯಾಷನಲ್, ಮನುಷ್ಯರಲ್ಲೂ ಕೂಡ ಅಷ್ಟೇ, rational and irrational. They all deserved to be treated in the same way.

DR. H.C. MAHADEVAPPA:- That must be treated.

MR. SPEAKER:- I know all the details about it. Let me not open my mouth.

ಶ್ರೀ ಎಂ.ಪಿ. ಪ್ರಕಾಶ್:- ನಮ್ಮ ಟಿ.ಪಿ. ಕೈಲಾಸಂರವರು ಹೇಳುತ್ತಿದ್ದರು, ಯಾರಿಗೆ ಗುಣ ಆಗು–ತ್ತದೆ ಅವರು ಮಾತ್ರ ಹುಚ್ಚಾಸ್ಪತ್ರೆಯಲ್ಲಿರುತ್ತಾರೆ, ಗುಣ ಆಗಲಾರದಂತಹವರು ಏನಿದ್ದಾರೆ ಅವರು ಹೊರಗಡೆ ಇದ್ದಾರೆ ಎಂದು.

ಶ್ರೀ ಎಸ್. ಸುರೇಶ್‌ಕುಮಾರ್:- ಮಾನ್ಯ ಅಧ್ಯಕ್ಷರೇ, ಒಂದು ಜರ್ಮನ್ ಗಾದೆ ಇದೆ, ಈ ಹುಚ್ಚುನಾಯಿ ಅಪರಿಚಿತರನ್ನು ಮಾತ್ರ ಕಚ್ಚುತ್ತದೆಯಂತೆ, ಆದರೆ ಹುಚ್ಚು ಮನುಷ್ಯ ಪರಿಚಿತರನ್ನೂ ಕಚ್ಚುತ್ತಾನೆ.

ಅಧ್ಯಕ್ಷರು:- ವಿಶ್ವೇಶ್ವರ ಹೆಗಡೆಯವರೇ, ತಮ್ಮ ಪ್ರಶ್ನೆ ಸಂಖ್ಯೆ: 1174ಕ್ಕೆ ಉನ್ನತ ಶಿಕ್ಷಣ ಸಚಿ–ವರು ಸಮಯವನ್ನು ಕೇಳಿದ್ದಾರೆ. ಇನ್ನೊಂದು ದಿವಸ ತೆಗೆದುಕೊಳ್ಳೋಣ.